ತಾರೀಖು 24ನೇ ಜೂ 1876.

ಯೆಗ್ಜಿಕ್ಯೂಟಿವ್ ಇಂಜನೀರ್ ಆಫೀಸ್, ನಂಬರ್ 1ನೇ ಟ್ಯಾಂಕ್ ಡಿವಿಜನ್ನಲ್ಲಿ ಡ್ರಾಫ್ಟ್ಸ್‌ಮೆನ್ ವ್ಯೂ C. ಮುರುಗೇಶಂಮೊದಲಿಯಾರಿಗೆ, ಅವರು ಯಾವ ತಾರೀಖುಲಾಗಾಯಿತು ವೊಪಯೋಗಿಸಿಕೊಳ್ಳುವರೋ ಆ ಲಾಗಾಯಿತು 23 ದಿವಸಗಳ ಪ್ರಿವಿಲಿಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಜೂ 1876.

ಬೆಂಗಳೂರು ರೇಂಜ್ ಸಬ್ ಡಿವಿಜನಲ್ ರೈಟರ್ S. ವೆಂಕೋಬರಾಯರಿಗೆ ಮೂಹೆ ಮುಜಕೂರು 15ರ ಲಾಗಾಯಿತು 20ರ ವರಿವಿಗೆ ಬಗರ್‌ತಲಬ್ 6 ದಿವಸಗಳ ರಜಾ ಕೊಡಲ್ಪಟ್ಟಿತು.

ತಾರೀಖು 24ನೇ ಜೂ 1876.

ಬೆಂಗಳೂರು ರೇಂಜ್ ಸ್ಟೋರ್‌ಕೀಪರ್ S. ಶ್ರೀನಿವಾಸರಾಯರಿಗೆ, ಮೂಹೆ ಮುಜಕೂರು 12ರ ಲಾಗಾಯಿತು 14ರ ವರಿವಿಗೆ ಬಗರ್‌ತಲಬ್ 3 ದಿವಸಗಳ ರಜಾ ಕೊಡಲ್ಪಟ್ಟಿತು.

C. B. TARGET,
Exec. Engr., No. I Tank Division.

ತಾರೀಖು 24ನೇ ಜೂ 1876.

ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಆಫಿಸ್ ಡ್ರಾಫ್ಟಸ್‌ಮ್ಯಾನ್ ವ ಎಸ್ಟಿಮೇಟರ್ ಪೊನ್ನ ಸಾಮಿ ಮೊದಲ್ಯಾರಿಗೆ 1876ನೇ ಇಸವಿ ಜೂ 23ನೇ ಮರ್ಕುಂ ಲಗಾಯತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

R. C. DOBBS, C. E.,
Exec. Engr., Mysore Division.

ತಾರೀಖು 21ನೇ ಜೂ 1876.

ಕೊಡಗು ಡಿವಿಜ್ 2ನೇ ನಂಬರ್ ಸಬ್ ಡಿವಿಜ್ ಮುತ್ಸದ್ದಿ ಶ್ರೀಕಂಠಯ್ಯನವರಿಗೆ ಮೂಹೇ ಮುಜಕೂರ್ 12ನೇ ಮರ್ಕುಂ ಲಗಾಯತು 20 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

W. P. LYNAM, C. E.,
Asstt. Engineer, Cauvery Division.

ಫಾರೆಸ್ಟ್ ಇಲಾಖಾ.

ತಾರೀಖು 30ನೇ ಮೇ 1876.

ಇದರಿಂದ ತಿಳಿಯಪಡಿಸುವದೇನಂದರೆ,—ದಾರವಾಡ್ ಜಿಲ್ಲಾ ಕೋಡಿ ತಾಲ್ಲೂಕು ಫಕೀರಪ್ಪಯಂಬ ಹೆಸರುಳ್ಳ ವೊಬ್ಬ ಮನುಷ್ಯನು ಸ್ಯ 1874ನೇ ಇಸವಿ ಏಪ್ರೀಲ್ ತಿಂಗಳಲ್ಲಿ ಕೊಂಡುಕ್ಕೊಂಡ ಚೌಬಿನೇ ಪೈಕಿ ಉಳಿಸಿಕೊಳ್ಳಲ್ಪಡದ ವೊಂದು ಮರದ ದಿಮ್ಮಿಯು ಕೇಳಲ್ಪಡದೆ ಅದ್ಯಾಪಿ ನಗರ ಡಿವಿಜ್ ಶಿವಮೊಗ್ಗಾ ಡಿಸ್ಟ್ರಿಕ್ಟು ಅನಂತಪುರ ಡಿಪೊಯಲ್ಲಿ ಬಿದ್ದಿರುತ್ತೆ. ಸದರೀ ಫಕೀರಪ್ಪನೆಂಬುವನು ಶಿವಮೊಗ್ಗೆಯಲ್ಲಿರುವ ಡಿಪ್ಯೂಟಿ ಕಂಸರ್ವೇಟರ್ ಯವರಲ್ಲಿ ಹಾಜರಾಗಿ 1876ನೇ ಇಸವಿ ಜುಲೈ 31ನೇ ಮರ್ಕುಂಮಿಗೆ ಮುಂಚಿತವಾಗಿ ಸದರೀ ದಿಮ್ಮಿಯನ್ನು ಸಾಗಿಸಿಕೊಂಡು ಹೋಗತಕ್ಕದ್ದು. ಯಿದಕ್ಕೆ ತಪ್ಪಿದರೆ ಸದರೀ ದಿಮ್ಮಿಯು ಬೇವಾರ್ಸು ಮರದೋ ಪಾದಿಯಲ್ಲಿ ಮೈಸೂರು ಗವರ್ನಮೆಂಟ್ ತಪ್ಪು ವಿಕ್ರಯಿಸಲ್ಪಟ್ಟು ಅದರ ಹುಟ್ಟುವಳಿಯು ಫಾರೆಸ್ಟು ರೂಲ್ಸು 30 ನ 31ರ ನಿಬಂಧನೇಗಳನುಸಾರವಾಗಿ ಮೈಸೂರು ಫಾರೆಸ್ಟು ಇಲಾಖೆಗೆ ಜಮೆ ಕಟ್ಟಲ್ಪಡುವದು.

ನಂ. 9. ತಾರೀಖು 17ನೇ ಜೂ್ನ 1876.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಶೇವೆಯ ನಗರ್ ಡಿವಿಜ್ನಲ್ಲಿ ವುತ್ಪತ್ತಿಯಾದ ಬಾ॥ ಈ ಕೆಳಗೆ ಕಂಡ ದೊಂ ಲಗಳು ಇದರಡಿ ಕಾಣಿಸಲ್ಪಟ್ಟ ಸ್ಥಳಗಳಲ್ಲಿಯೂ ತಾರೀಖಿನಲ್ಲಿಯೂ ಬಹಿರಂಗವಾದ ಹರಾಜ್‌ಮೂಲಕ ವಿಕ್ರಯಿಸಲ್ಪಡುವದು.

ಸ್ಥಳ ಮತ್ತು ತಾರೀಖು.	ತೇಗ.	ಬೀಟೆ.	ಕಾಡುಮರ.	ತೇಗದ ಕೊಂಚೆಗಳು.	ಕಾಡುಮರದ ಕೊಂಚೆಗಳು.	ಗಳುಗಳು.	ಜ್ಞಾನ್.
ಲಕ್ಕುವಳ್ಳಿ.							
1876ನೇ ಇಸವಿ ಜುಲೈ ತಾ॥ 13ರಲ್ಲಿ.	3	0	446	0	2.	446	897
ಶಿವಮೊಗ್ಗ.							
ಡಿಟೋ 24ನೇ ತಾರೀಖಿನಲ್ಲಿ. ..	189	52	563	524	282	3,451	5,061

ಹರಾಜ್ ನಿಬಂಧನೆ—ಸ್ಯ 1873ನೇ ಇಸವಿ ಜೂ್ನ 12ನೇ ತಾರೀಖಿನಲ್ಲಿ ಮೈಸೂರು ಗೆಜೆಟ್‌ನಲ್ಲಿ ಘಾಯಿಷ್ ಮಾಡಲ್ಪಟ್ಟ ಪ್ರಕಾರ ಮಾಮೂಲ್ ಮೇರೆ ಯಿರುತ್ತೆ. ಸರ್‌ಕಿಲರ್ ಹರಾಜ್ ತಾರೀಖಿನಲ್ಲಿಯೂ ಆಯಾ ಸ್ಥಳದಲ್ಲಿಯೂ ವೋದಲ್ಪಡುವದು.

G. J. VAN SOMEREN, *Captain,*
Conservator of Forests, Mysore & Coorg.

ನಂದೀದುರ್ಗ ಡಿವಿಜ್.

ತಾರೀಖು 24ನೇ ಜೂ್ನ 1876.

ಮುದ್ದಗಿರೀ ತಾಲ್ಲೂಕು ಕಾಯಂ ಮೇಸ್ತ್ರಿ ಪಾರ್ಥಸಾರಥಿನಾಯಿಡುಗೆ ಅವರು ಉಪಯೋಗಿಸಿಕ್ಕೊಳ್ಳುವ ತಾರೀಖು ಲಗಾಯತು 15 ದಿವಸದ ರಜೆ ಮಂಜೂರಾಗಿರುತ್ತೆ.

J. L. PEARSE.,
Commissioner.

BANGALORE DISTRICT.

Notice regarding an application of Sub Rao for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟೀ ಕಮಿಷ್ನರವರ ಕೋರ್ಟಿನಿಂದ.

ಸ್ಯ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂ. 44.

ಇದರಿಂದ ಸಮುಸ್ತರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಶಿದ್ದೀಕಟ್ಟೆಯಲ್ಲಿ ಇರುವ ಸುಬ್ಬರಾವ್ ಯೆಂಬುವನು ತನ್ನ ತಂದೆ ನಾರಾಯಣರಾಯನ ಲೇಪೆ 900 ರೂಪಾಯಿ ಬರಮಾಡಿಕೊಳ್ಳತಕ್ಕ ಬಗ್ಗೆ ಸ್ಯ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರ್ಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷ್ಣ 1876ನೇ ಇಸವಿ ಜುಲೈ ಮಾಹೇ 19ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟನಲ್ಲಿ ವಿಚಾರ್ಕೆ ಆಗಲ್ಪಡುತ್ತೆಯಾಗಿ ಆ ವೊಬಲಗು ಮೇಲೆ ಹಕ್ಕು ವುಳ್ಳವರು ಸದರೀ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನ ಸ್ಥಾಪಿಸಿಕೊಡಬಹುದು.

ಬತಾರೀಖು 20ನೇ ಮಾಹೇ ಜೂ್ನ 1876ನೇ ಇಸವಿ.